<u>**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ**</u>

<u>**ಶ್ರೀನಿವಾಸಪುರ**</u>

**ದಿನಾಂಕಃ20ನೇ ಜುಲೈ 2026**

**ಸಿಸಿ ಸಂಖ್ಯೆಃ 5/2026**

**ಪಿರ್ಯಾದುದಾರರು** ಃ ರಾಜ್ಯಪರ ಶ್ರೀನಿವಾಸಪುರ ಪೋಲಿಸರು

**ವಿರುದ್ಧ**

**ಆರೋಪಿತರು** ಃ ಸುಬ್ರಮಣಿ ಪ್ರಸಾದ್ ಎ ವಿ ಎಸ್
ಬಿನ್ ಎ ಸುಬ್ಬರಾಯ್ಡು,
55 ವರ್ಷ, ಎ ಎಸ್ ಚೆರುವು ವೀದಿ,
ಚಿತ್ತೂರು, ಆಂಧ್ರಪ್ರದೇಶ್.

<u>**ಆರೋಪಣೆ**</u>

***ಶ್ರೀ ಕರ್ನ ಸಿಂಗ್ ಆರ್.ಯು., ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಶ್ರೀನಿವಾಸಪುರ ಆದ ನಾನು ಮೇಲ್ಕಂಡ ಆರೋಪಿಗಳಾದ ನಿಮ್ಮ ಮೇಲೆ ಈ ಕೆಳಗಿನಂತೆ ಆರೋಪಣೆಯನ್ನು ಮಾಡುತ್ತೇನೆ.***

ದಿನಾಂಕ 18.05.20243 ರಂದು ರಾತ್ರಿ 08.00 ಗಂಟೆ ಸಮಯದಲ್ಲಿ ಚಾಸಾ 1 ಮತ್ತು 2ರವರು ತಮ್ಮ ಬಾಬತ್ತು ಕೆಎ.07.ಇಹೆಚ್.2047 ದ್ವಿಚಕ್ರ ವಾಹನದಲ್ಲಿ ಶ್ರೀನಿವಾಸಪುರ ತಾಲ್ಲೂಕು ಗೊಟ್ಟಿಕುಂಟೆ ಗ್ರಾಮದ ತಮ್ಮ ಸಂಬಂಧಿಕರ ಮನೆಗೆ ಹೋಗಲೆಂದು ಯದರೂರು ಗೇಟ್‌ನಲ್ಲಿ ಕತ್ತಿಬಿಸನಹಳ್ಳಿ ಕಡೆ ಹೋಗಲು ಶ್ರೀನಿವಾಸಪುರ ಮುಳಬಾಗಿಲು ರಸ್ತೆ ಮುಖಾಂತರ ಹಾದು ಹೋಗುತ್ತಿದ್ದಾಗ ಆರೋಪಿಯಾದ ನೀವು ಶ್ರೀನಿವಾಸಪುರ ಕಡೆಯಿಂದ ಎಪಿ.03.ಸಿಎ.3699 ನಂಬರಿನ ಕಾರನ್ನು ಅತಿವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ಚಾಸಾ 1 ಮತ್ತು 2ರವರ ದ್ವಿಚಕ್ರ ವಾಹನಕ್ಕೆ ಡಿಕ್ಕಿಪಡಿಸಿ

ಅಪಘಾತವನ್ನುಂಟು ಮಾಡಿರುತ್ತೀರಿ, ಆ ಮೂಲಕ ಆರೋಪಿಯಾದ ನೀವು ಭಾರತೀಯ ದಂಡ ಸಂಹಿತೆ ಕಲಂ **279** ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯತೆಯಲ್ಲಿ ಎಸಗಿರುತ್ತೀರಿ ಎಂದು ಆಪಾದಿಸಲಾಗಿದೆ.

ಎರಡನೆಯದಾಗಿ, ಮೇಲಿನ ದಿನಾಂಕ, ವೇಳೆ ಮತ್ತು ಸ್ಥಳದಲ್ಲಿ ಆರೋಪಿಯಾದ ನೀವು ಸದರಿ ಕಾರ್ ವಾಹನವನ್ನು ಅತಿವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ಚಾಸಾ 1 ಮತ್ತು 2 ರವರಿಗೆ ಡಿಕ್ಕಿ ಹೊಡೆದ ಪರಿಣಾಮ ಚಾಸಾ 1ರವರಿಗೆ ಎಡಗಾಲಿಗೆ ಮೂಳೆ ಮುರಿತದ ತೀವ್ರ ಸ್ವರೂಪದ ಗಾಯವಾಗಿದ್ದು ಹಿಂಬದಿ ಕುಳಿತಿದ್ದ ಚಾಸಾ 2ರವರಿಗೆ ಬಲಗಾಲಿಗೆ ಮೂಳೆ ಮುರಿತದ ತೀವ್ರ ಸ್ವರೂಪದ ಗಾಯಗಳನ್ನುಂಟು ಮಾಡಿರುತ್ತೀರಿ, ಆ ಮೂಲಕ ಆರೋಪಿಯಾದ ನೀವು ಭಾರತೀಯ ದಂಡ ಸಂಹಿತೆ ಕಲಂ **338**ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯತೆಯಲ್ಲಿ ಎಸಗಿರುತ್ತೀರಿ ಎಂದು ಆಪಾದಿಸಲಾಗಿದೆ.

**ಮೇಲ್ಕಂಡ ಅಪರಾಧಗಳ ವಿಚಾರಣೆ ಈ ನ್ಯಾಯಾಲಯದಲ್ಲಿ ನಡೆಯುವಂತೆ ನಿರ್ದೇಶಿಸುತ್ತೇನೆ.**

**(ಮೇಲಿನ ಆರೋಪಣೆ ಸಾರಾಂಶವನ್ನು ಆರೋಪಿಗಳಿಗೆ ಓದಿ, ತಿಳಿ ಹೇಳಿದ ನಂತರ ಅವರು ಅದನ್ನು ಅರ್ಥೈಸಿಕೊಂಡು ನಂತರ ನೀಡಿದ ಉತ್ತರಗಳನ್ನು ನಾನೇ ಸ್ವತಃ ದಾಖಲು ಮಾಡಿದ್ದೇನೆ. ಸದರಿ ದಾಖಲೆಯು ಸರಿಯಾದುದು ಮತ್ತು ನಿಜವಾದದು ಎಂದು ಧೃಡೀಕರಿಸುತ್ತೇನೆ)**

**(ಕರ್ನ ಸಿಂಗ್ ಆರ್.ಯು.)**
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ,
ಶ್ರೀನಿವಾಸಪುರ.